ವಿದ್ಯಾರ್ಥಿ ಪಾಸಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು:

FAQs' of Student Pass:

1. **ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ರಿಯಾಯಿತಿ ಪಾಸಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು ಹೇಗೆ?**
   - ಆನ್‌ಲೈನ್ ಅರ್ಜಿಗಾಗಿ https://mybmtc.karnataka.gov.in ನ್ನು ಭೇಟಿ ನೀಡುವುದು. "ವಿದ್ಯಾರ್ಥಿ ಬಸ್ ಪಾಸ್ ಆನ್‌ಲೈನ್ ಅರ್ಜಿ" ಯನ್ನು ಆಯ್ಕೆ ಮಾಡುವುದು. ಒಂದು ಬಾರಿ ವಿದ್ಯಾರ್ಥಿ ಪಾಸ್ ಮುಖಪುಟವು ತೆರದ ಮೇಲೆ **"10ನೇ ತರಗತಿಯವರೆಗೆ ಅಥವಾ ಸಿಬಿಎಸ್‌ಇ/ಐಸಿಎಸ್‌ಇ ಅಥವಾ ಪಿಯುಸಿ ಅಥವಾ ಪದವಿ/ವೃತ್ತಿಪರ/ತಾಂತ್ರಿಕ/ವೈದ್ಯಕೀಯ ಅಥವಾ ವಿಶೇಷ ಶಾಲೆಗಳು ಆಯ್ಕೆ ಮಾಡಿಕೊಳ್ಳುವುದು.**

**a) How to apply for pass online student pass (smartcard)?**
   - Visit https://mybmtc.karnataka.gov.in for online application. Click on "online student pass application". Once the main page gets navigated to Student Pass page, kindly click on "Up to 10th **(or)**CBSE/ICSE **(or)**PUC **(or)**Degree/Professional/Technical/Medical **(or)**Special schools".

2. **ಅರ್ಜಿಯಲ್ಲಿ ಎಸ್‌ಎಟಿಎಸ್ ಸಂಖ್ಯೆ ಎಂದರೇನು? (10ನೇ ತರಗತಿಯವರೆಗೆ ಮತ್ತು ಪಿಯುಸಿ ಪಾಸ್ ಅರ್ಜಿಯಲ್ಲಿ).**
   - ಎಸ್‌ಎಟಿಎಸ್ ಸಂಖ್ಯೆ ಎಂದರೆ "Student Achievement Track System" ಸದರಿ ಸಂಖ್ಯೆಯು 10 ನೇ ತರಗತಿಯವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿರುತ್ತದೆ (ರಾಜ್ಯ ಪಠ್ಯಕ್ರಮ ಶಾಲೆಗಳ ವಿದ್ಯಾರ್ಥಿಗಳಿಗೆ)
   - ಪಿಯುಸಿ ವಿದ್ಯಾರ್ಥಿಗಳು ಸಹ ಎಸ್‌ಎಟಿಎಸ್ ಸಂಖ್ಯೆ (10ನೇ ತರಗತಿ) ಯನ್ನು ಬಳಸಬಹುದಾಗಿರುತ್ತದೆ.

**b) What is SATS number in the application (Up to 10thSTD and PUC Students pass application)?**
   - SATS number is a "Student Achievement Track System" number which is unique for all the students up to 10th standard (for the students of state syllabus schools).
   - PUC students can also use their SATS (10th std) number.

3. **ವಿದ್ಯಾರ್ಥಿ ಪಾಸ್ ಅರ್ಜಿಯಲ್ಲಿ enrollment ಸಂಖ್ಯೆ ಎಂದರೇನು (ಪಿಯುಸಿ ವಿದ್ಯಾರ್ಥಿಗಳು)?**
   - ವಿದ್ಯಾರ್ಥಿಗಳಿಗೆ enrollment ಸಂಖ್ಯೆಯನ್ನು ಪಿಯು ಬೋರ್ಡ್‌ನಿಂದ ನೀಡಲಾಗಿರುತ್ತದೆ ಹಾಗೂ ಸದರಿ ಸಂಖ್ಯೆಯು ಎಲ್ಲಾ ಪಿಯುಸಿ ವಿದ್ಯಾರ್ಥಿಗಳಿಗೂ ಪ್ರತ್ಯೇಕವಾಗಿರುತ್ತದೆ.

**C) What is enrollment number in the student pass application (PUC Students)?**
   - Student Enrollment number is provided by the PU board and the number is unique for all the PUC students.

4. **ಎಸ್‌ಎಟಿಎಸ್ ಸಂಖ್ಯೆ ಹಾಗೂ enrollment ಸಂಖ್ಯೆ ಇಲ್ಲದ ಪಿಯುಸಿ ವಿದ್ಯಾರ್ಥಿಗಳು ವಿದ್ಯಾರ್ಥಿ ಪಾಸಿಗೆ ಅರ್ಜಿ ಸಲ್ಲಿಸುವುದು ಹೇಗೆ?**
   - ಸಿಬಿಎಸ್‌ಇ/ಐಸಿಎಸ್‌ಇ ವ್ಯಾಸಂಗದಿಂದ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳಿಗೆ ಎಸ್‌ಎಟಿಎಸ್ ಸಂಖ್ಯೆ ಹಾಗೂ enrollment ಸಂಖ್ಯೆ ಲಭ್ಯವಿರುವುದಿಲ್ಲ. ಅಂತಹವರು ತಮ್ಮ ದಾಖಲಾತಿ ಸಂಖ್ಯೆಯನ್ನು ಬಳಸಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

**D) How to apply for student pass for PUC students who does't have SATS/ PU enrollment number?**
   - Students enrolled to PUC from CBSE/ ICSE stream may not have SATS/ PU enrollment number. They can apply for the student pass using their admission number.

5. **ವಿದ್ಯಾರ್ಥಿ ಪಾಸ್ ಅರ್ಜಿಯಲ್ಲಿ ದಾಖಲಾತಿ ಸಂಖ್ಯೆ ಎಂದರೇನು ಸಿಬಿಎಸ್‌ಇ/ ಐಸಿಎಸ್‌ಇ/ ಪದವಿ/ ತಾಂತ್ರಿಕ/ ವೈದ್ಯಕೀಯ/ ವೃತ್ತಿಪರ/ ಇತರೆ/ ಸಂಜೆ ಕಾಲೇಜು/ ಪಿಎಚ್.ಡಿ)?**
   - ವಿದ್ಯಾರ್ಥಿ ದಾಖಲಾತಿ ಸಂಖ್ಯೆ ಎಂದರೆ ಪ್ರವೇಶ ಸಮಯದಲ್ಲಿ ಶಿಕ್ಷಣ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ನೀಡಲಾದ ಸಂಖ್ಯೆ. (ಉದಾ: 12345/202–22).

**E) What is admission number in the pass application (PUC/ CBSE/ ICSE/ Degree/ Technical/ Medical/ Proffessional/ Others/ Evening/ Ph.D)?**
   - Student Admission number is the number provided to the students by their institutions at the time of admission. (Ex- 12345/202-22)

6. **ಡ್ರಾಪ್ ಡೌನ್‌ನಲ್ಲಿ ಶಿಕ್ಷಣ ಸಂಸ್ಥೆಯ ಹೆಸರು ಇಲ್ಲದೇ ಹೋದಲ್ಲಿ?**
   - ಶಿಕ್ಷಣ ಸಂಸ್ಥೆಯ ಆಡಳಿತ ವರ್ಗವು ಬೆಂಮಸಾಸಂಸ್ಥೆಯನ್ನು ಸಂಪರ್ಕಿಸಲು ತಿಳಿಸಿ, ಕಾಲೇಜ್ ಹೆಸರನ್ನು ನೋಂದಾಯಿಸುವುದು.

**F) Institution name is not showing in the dropdown?**

- Ask your college administration to contact BMTC and register the college name.

**7. ಅರ್ಜಿಯಲ್ಲಿ ಯಾವ ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿಯನ್ನು ನಮೂದಿಸಬೇಕು?**

- ಸದರಿ ಮೊಬೈಲ್ ಸಂಖ್ಯೆ/ಇ–ಮೇಲ್ ಐಡಿಗೆ ಅರ್ಜಿಯಲ್ಲಿ ನಮೂದಿಸಬೇಕಾದ ಓಟಿಪಿ ಸಂಖ್ಯೆಯು ಸ್ವೀಕೃತವಾಗುವುದು. ಆದ್ದರಿಂದ ಓಟಿಪಿ ಪಡೆಯಲು ಅನುಕೂಲಕರವಾದ ಮೊಬೈಲ್ ಸಂಖ್ಯೆ/ಇ–ಮೇಲ್ ಐಡಿ ಯನ್ನು ನಮೂದಿಸುವುದು.
- ವಿದ್ಯಾರ್ಥಿ ಪಾಸಿಗೆ ಸಂಬಂಧಿಸಿದಂತೆ ಯಾವುದೇ ವಿಷಯ/ಮಾಹಿತಿಯನ್ನು ನೀಡಬೇಕಿದಲ್ಲಿ ವಿದ್ಯಾರ್ಥಿ ಪಾಸ್ ಅರ್ಜಿಯಲ್ಲಿ ನಮೂದಿಸಲಾದ ಮೊಬೈಲ್ ಸಂಖ್ಯೆ/ಇ–ಮೇಲ್ ಐಡಿಗೆ ರವಾನಿಸಲಾಗುವುದು.

**G) Which mobile number/Email-ID to be mentioned in the application?**

- This mobile number/Email ID will receive the OTP which has to be entered in the application.
- Any communication in respect to the student pass shall be sent to the mobile number/Email ID which is entered in the application.

**8. ಅರ್ಜಿಯಲ್ಲಿ ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿಯನ್ನು ನಮೂದಿಸುವುದು ಕಡ್ಡಾಯವೇ?**

- ಅರ್ಜಿಯಲ್ಲಿ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ, ಆದರೆ ಇ–ಮೇಲ್ ಐಡಿಯನ್ನು ನಮೂದಿಸುವುದು ಕಡ್ಡಾಯವಾಗಿರುವುದಿಲ್ಲ.

**H) Entering mobile number and Email-ID in the application is mandatory?**

- Entering Mobile number is mandatory and the Email-ID is optional.

**9. ಒಂದು ವೇಳೆ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಾಗಿದ್ದಲ್ಲಿ, ಆರ್‌ಡಿ ಸಂಖ್ಯೆ ಎಂದರೇನು?**

- ಜಾತಿ ಪ್ರಮಾಣ ಪತ್ರದಲ್ಲಿರುವ ಸಂಖ್ಯೆ, ಸದರಿ ಸಂಖ್ಯೆಯು "RD" ಅಕ್ಷರಗಳಿಂದ ಪ್ರಾರಂಭವಾಗಿ, ಸಂಖ್ಯೆಗಳಿಂದ ಮುಂದುವರೆಯುತ್ತದೆ.

**I) In case of SC/ST students, what is RD number?**

- The number in the caste certificate, which start with the letters "RD"

**10. "ಎಲ್ಲಿಂದ" ಮತ್ತು "ಎಲ್ಲಿಗೆ" ನಿಲುಗಡೆಗಳ ಕಾಲಂನಲ್ಲಿ ಏನು ನಮೂದಿಸಬೇಕು?**

- ಅರ್ಜಿಯಲ್ಲಿ ಸದರಿ ಎರಡು ಕಾಲಂಗಳು ಕಡ್ಡಾಯವಾಗಿದ್ದು, ಎಲ್ಲಿಂದ ಕಾಲಂನಲ್ಲಿ ವಾಸಸ್ಥಳದ ನಿಲುಗಡೆ ಹಾಗೂ ಎಲ್ಲಿಗೆ ಕಾಲಂನಲ್ಲಿ ಶಿಕ್ಷಣ ಸಂಸ್ಥೆಯ ನಿಲುಗಡೆಯನ್ನು ನಮೂದಿಸಬೇಕಾಗಿರುತ್ತದೆ.

**J) What needs to enter in the fields like "from stop" and "to stop"?**

- These two fields are mandatory where "From Stop" should be the "origin" and "To Stop" should be the "Destination".

**11. "ಮಾರ್ಗ 1" ಮತ್ತು "ಮಾರ್ಗ 2" ರ ಕಾಲಂನಲ್ಲಿ ಏನು ನಮೂದಿಸಬೇಕು?**

- ಸದರಿ ಕಾಲಂಗಳನ್ನು ನಮೂದಿಸುವುದು ಕಡ್ಡಾಯವಾಗಿರುವುದಿಲ್ಲ, ಮಾರ್ಗ ಸ್ಥಳವು ಎಲ್ಲಿಂದ ಎಲ್ಲಿಗೆ ನಿಲುಗಡೆಗಳ ಮಧ್ಯದಲ್ಲಿರುತ್ತದೆ ಹಾಗೂ ಸದರಿ ಸ್ಥಳವನ್ನು ಪ್ರಯಾಣದ ಮಾರ್ಗ ಬದಲಾವಣೆ ಸ್ಥಳವನ್ನಾಗಿ ಬಳಸಬಹುದಾಗಿರುತ್ತದೆ.

**K) What needs to enter in the fields like "Via 1" and "Via 2"?**

- These are optional fields, where via places should be in between Origin and Destination. These places can be used as your travel change over junction.

**12. ವಿದ್ಯಾರ್ಥಿ ಭಾವಚಿತ್ರ ಮತ್ತು ಶಾಲೆ/ಕಾಲೇಜು ಶುಲ್ಕ ಪಾವತಿ ರಸೀದಿಯಲ್ಲಿ ಹೇಗೆ ಅಪ್ಲೋಡ್ ಮಾಡಬೇಕು (10ನೇ ತರಗತಿಯವರೆಗೆ ಹೊರತುಪಡಿಸಿ)?**

- ವಿದ್ಯಾರ್ಥಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಜೆಪಿಇಜಿ/ಜೆಪಿಜಿ/ಪಿಎನ್‌ಜಿ ಫೈಲ್‌ನಲ್ಲಿ ಅಪ್ಲೋಡ್ ಮಾಡುವುದು ಹಾಗೂ ಸದರಿ ಭಾವಚಿತ್ರವು 01 ಎಂಬಿ ಕ್ಕಿಂತ ಕಡಿಮೆಯಿರಬೇಕು.
- ಪ್ರವೇಶದ ಸಮಯದಲ್ಲಿ ಶಿಕ್ಷಣ ಸಂಸ್ಥೆಗೆ ಶುಲ್ಕ ಪಾವತಿಸಿರುವ ರಸೀದಿಯನ್ನು ಅಪ್ಲೋಡ್ ಮಾಡುವುದು.

**L) How to upload Applicant Photo and School/College Fee Receipt (other than up to 10th standard students)?**

- Upload the student’s passport size photo in JPEG/ JPG/ PNG file and it should be less than 01 MB in size.
- School fee receipt should be uploaded.

**13. ಅರ್ಜಿಯಲ್ಲಿ ನಮೂದಿಸಲು ಓಟಿಪಿ ಎಲ್ಲಿ ಲಭ್ಯವಾಗುತ್ತದೆ?**

- ಅರ್ಜಿಯಲ್ಲಿ ಅವಶ್ಯವಿರುವ ಎಲ್ಲಾ ಕಾಲಂಗಳಲ್ಲಿ ಮಾಹಿತಿಯನ್ನು ನಮೂದಿಸಿದ ನಂತರ ಅರ್ಜಿಯ ಅಂತ್ಯದಲ್ಲಿ “Send OTP” ಯನ್ನು ಆಯ್ಕೆ ಮಾಡುವುದು (Send OTP ಯನ್ನು ಆಯ್ಕೆ ಮಾಡುವ ಮುನ್ನ ಅವಶ್ಯವಿರುವ ಎಲ್ಲಾ ಕಾಲಂಗಳಲ್ಲಿ ಮಾಹಿತಿಯನ್ನು ನಮೂದಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು), ಆನಂತರ ಓಟಿಪಿಯನ್ನು ಅರ್ಜಿಯಲ್ಲಿ ನಮೂದಿಸಲಾದ ಮೊಬೈಲ್ ಸಂಖ್ಯೆ ಹಾಗೂ ಇ–ಮೇಲ್ ಐಡಿಗೆ ರವಾನಿಸಲಾಗುವುದು.

**M) Where do I get the OTP to enter in the application?**

- After filling the required fields in the application, you have to click on “Send OTP” at the end of the application (see that, all the required fields are filed before clicking on send OTP), OTP will be sent to the mobile number and the email ID mentioned in the application.

**14. ವಿದ್ಯಾರ್ಥಿ ಪಾಸಿಗೆ ಅರ್ಜಿ ಸಲ್ಲಿಸಿದ ನಂತರ, ಮುಂದಿನ ಪ್ರಕ್ರಿಯೆ ಏನು (10ನೇ ತರಗತಿಯವರೆಗೆ ರಾಜ್ಯ ಪಠ್ಯಕ್ರಮ ಶಾಲೆಗಳ ವಿದ್ಯಾರ್ಥಿಗಳನ್ನು ಹೊರತುಪಡಿಸಿ)?**

- ಅರ್ಜಿಯ ಸ್ಥಿತಿಗತಿಯನ್ನು ಪರಿಶೀಲಿಸುವುದು. ಇನ್ನೂ ಅರ್ಜಿಯು ಅನುಮೋದನೆಯಾಗಬೇಕಿದಲ್ಲಿ, ವಿದ್ಯಾರ್ಥಿ ಪಾಸಿನ ಅರ್ಜಿಯ ಅನುಮೋದನೆಗಾಗಿ ಕಾಲೇಜಿನ ನೋಡಲ್ ಅಧಿಕಾರಿಯನ್ನು ಸಂಪರ್ಕಿಸುವುದು.

**N) After applying for the student pass, what is the next process (Other than up to 10thStd state syllabus students)?**

- Check the status of your application. If the application is yet to be approved, then contact the nodal officer of your college for the approval of the student pass application.

**15. ವಿದ್ಯಾರ್ಥಿ ಪಾಸ್ ಸ್ಥಿತಿಗತಿಯನ್ನು ಪರಿಶೀಲಿಸುವುದು ಹೇಗೆ?**

- ವೆಬ್ ಪುಟದ ಅಂತ್ಯದಲ್ಲಿ “Know your application status” ಎಂಬ ಕಾಲಂ ಇದ್ದು, ಅಲ್ಲಿ ಅರ್ಜಿ ಸಂಖ್ಯೆಯನ್ನು ನಮೂದಿಸಿ, “search” ಅನ್ನು ಆಯ್ಕೆ ಮಾಡುವುದು.

**O) How to check the status of the student pass?**

- At the end of the web page, there is a vertical called “Know your application status”, enter your application number and click on “search”.

**16. ವೆಬ್ ಪುಟದಲ್ಲಿ ವೇಳಾಪಟ್ಟಿ ನಿಗದಿಪಡಿಸುವಿಕೆ / ವೇಳಾ ಪಟ್ಟಿ ಮರು ನಿಗದಿಪಡಿಸುವಿಕೆ ಎಂದರೇನು?**

- ಬೆಂಮಸಾಸಂಸ್ಥೆಯ ಕೌಂಟರ್‌ಗಳಲ್ಲಿ ವೇಳಾಪಟ್ಟಿಯನ್ನು ನಿಗದಿಪಡಿಸಿಕೊಳ್ಳುವ ಮೂಲಕ ಪಾಸನ್ನು ಪಡೆಯಲು ಮುಂಗಡವಾಗಿಯೇ ಇಚ್ಛಿಸಿದ ದಿನ ಮತ್ತು ಸಮಯವನ್ನು ಕಾಯ್ದಿರಿಸಿಕೊಳ್ಳಬಹುದು.
- ವೇಳಾಪಟ್ಟಿಯನ್ನು ನಿಗದಿಪಡಿಸಿಕೊಂಡ ನಂತರ, ಒಂದು ವೇಳೆ ವಿದ್ಯಾರ್ಥಿಯು ಪಾಸನ್ನು ಪಡೆಯಲು ಬೆಂಮಸಾಸಂಸ್ಥೆಯ ಪಾಸ್ ಕೌಂಟರ್‌ಗೆ ಭೇಟಿ ನೀಡದೇ ಹೋದ ಪಕ್ಷದಲ್ಲಿ, ಇನ್ನೂ 2 ಬಾರಿ ವೇಳಾಪಟ್ಟಿಯನ್ನು ಮರು ನಿಗದಿಪಡಿಸಿಕೊಳ್ಳಬಹುದು.

**P) What is schedule/Reschedule appointment in the webpage?**

- Students must schedule an appointment on feasible day & time to get the pass from BMTC counters.
- After scheduling their appointment, if the student couldn’t come down to the BMTC counters, he can reschedule his appointment for 02 more times.